ಇಸ್ಲಾಂನ ಪ್ರಭಾವವು ಹೆಚ್ಚು ರಚನಾತ್ಮಕವಾದ ಧಾರ್ಮಿಕ ಚೌಕಟ್ಟನ್ನು ಒದಗಿಸಿತು ಹಾಗೂ ಬಡುಕಟ್ಟುಗಳ ನಡುವಿನ ಸಾಂಸ್ಕೃತಿಕ ಭಿನ್ನತೆಯನ್ನು ಮೀರಿ, ಒಂದು ಸಮುದಾಯವಾಗಿ ನಮ್ಮ ರೂಢಿ ಹೇಗಿರಬೇಕೆಂಬುದನ್ನು ಮರು ನಿರೂಪಿಸಿತು. ಈ ಕಾರಣಕ್ಕಾಗಿಯೇ ಪೂರ್ವಿಕರ ಆರಾಧನೆ, ಮದುವೆ-ಮುಂಜಿಯಂತಹ ಪ್ರಸಂಗಗಳು, ಕೆಲವು ನಾಟ್ಯ ಕಲೆಗಳು, ಪ್ರಾಣಿಬಲಿ ನೀಡುವುದು ಮತ್ತು ಕೃಷಿ ಪದ್ಧತಿಗಳಂತಹ ಅನೇಕ ಸ್ಥಳೀಯ ಬುಡಕಟ್ಟು ಸಂಪ್ರದಾಯಗಳು ದೈನಂದಿನ ಜೀವನದ ಭಾಗವಾಗಿ ಉಳಿದು ಬಂದಿವೆ.

◆ **ನಿಮ್ಮಲ್ಲಿ 16ನೇ ಶತಮಾನದ ಬಳಿಕ ಬಹುತೇಕರು ಅಫಿಶಿಯಲ್ಲಾಗಿ ಇಸ್ಲಾಂ ಧರ್ಮ ಅನುಸರಿಸಿದರೂ ಅರಬ್ ಸಂಸ್ಕೃತಿಯ ಮೇಲರಿಮೆ, ಪ್ರಭಾವ ಅಷ್ಟಾಗಿ ಎದ್ದು ಕಾಣ್ಸೊದಿಲ್ಲ. ಉದಾಹರಣೆಗೆ ನಿಮ್ಮಲ್ಲಿ ಜನ ಈಗಲೂ ಇಟ್ಟುಕೊಳ್ಳುವ ಹೆಸರುಗಳನ್ನೇ ಗಮನಿಸಿದರೆ ಇದು ಗೊತ್ತಾಗುತ್ತೆ: ವಿಷ್ಣು ಕ್ರಿಶ್ಚಿಯನ್ನೋ, ಮೊಹಮ್ಮದ್ ವಿಷ್ಣು, ಮೇಘವತಿ ಸುರ್ನೋ ಪುತ್ರಿ, ಮೊಹಮ್ಮದ್ ಪ್ರಾಣಾನಂದ ಪ್ರಭುವೊ, ಪೂಅನ್ ಮಹಾರಾಣಿ ಹಾಗೂ ಶೀಲಾ ಬೇಗಂ ಇತ್ಯಾದಿ. ಇದರ ಕುರಿತು ಸ್ವಲ್ಪ ವಿವರಿಸಬಹುದಾ?**

'Raden mas muhammad dimas hadi mangkubumi prawira prakoso kuntjoro djayadiningrat'

ಮೇಲಿನದು ವಾಕ್ಯವಲ್ಲ. ಒಂದು ಮಗುವಿನ ಹೆಸರು. ಇಷ್ಟುದ್ದದ ಹೆಸರು ಯಾಕೆ ಬಂತು ಗೊತ್ತಾ? ಈ ಹೆಸರಿನಲ್ಲಿ ಜಾವ ಬುಡಕಟ್ಟಿನ ನೆನಪುಗಳಿವೆ. ಕುಟುಂಬದ ಮನೆಯ ಹಿರೀಕರ ಸ್ಮರಣೆ ಇದೆ. ಇದರಲ್ಲಿ ಅಜ್ಜಿ, ಮುತ್ತಜ್ಜಿ, ತಾತಾ, ಮುತ್ತಾತರ ಹೆಸರುಗಳಿವೆ. ಹುಟ್ಟಿದ ಊರಿನ ನೆನಪುಗಳಿವೆ. ಅವರು ಮಾಡುವ ಕಾಯಕವಿದೆ. ಜನ್ಮ ದಿನಾಂಕಕ್ಕೆ ಸಂಬಂಧಿಸಿದ ದಿನ ತಿಂಗಳು ವರುಷಗಳಿವೆ. ಅಡ್ಡ ಹೆಸರುಗಳಿವೆ, ಕುಲ ಚರಿತ್ರೆಗಳಿವೆ, ಐತಿಹಾಸಿಕ ಸಾಧನೆಗಳಿವೆ. ಇದೆಲ್ಲದರ ಜೊತೆಗೆ ಸಾಮಾನ್ಯವಾಗಿ ಇಸ್ಲಾಮಿನ ಧಾರ್ಮಿಕ ಪೂರ್ವನಾಮವಾದ 'ಮೊಹಮ್ಮದ್' ಸೇರಿಕೊಳ್ಳುತ್ತದೆ.

ನನ್ನ ಪ್ರಕಾರ ಇಂಡೋನೇಷಿಯಾದಲ್ಲಿ ಇಸ್ಲಾಂನ ಸಾಂಸ್ಕೃತಿಕ ಏಕೀಕರಣವು ವಿಶಿಷ್ಟವಾಗಿದೆ. ಈ ಪ್ರದೇಶದ ಬಹುತೇಕ ಜನರು ಇಸ್ಲಾಮಿಕ್ ಆಚಾರ– ವಿಚಾರಗಳನ್ನು ಅಳವಡಿಸಿಕೊಂಡರೂ, ಮುಸ್ಲಿಂ ಜಗತ್ತಿನ ಇತರ ದೇಶಗಳಲ್ಲಿ ಇರುವ ಹಾಗೆ ಅರಬ್ ಪ್ರಭಾವದ ದಟ್ಟ ಪ್ರಾಬಲ್ಯಕ್ಕೆ ಸಿಲುಕಿಲ್ಲ. ಇಲ್ಲಿ ಇಸ್ಲಾಮೀಕರಣದ ಪ್ರಕ್ರಿಯೆಯು ಇಸ್ಲಾಮಿಕ್ ಬೋಧನೆಗಳನ್ನು ಸ್ಥಳೀಯ ಸಂಸ್ಕೃತಿಗೆ ಅನ್ವಯಿಸಿಕೊಂಡು ಗುರುತಿಸಲ್ಪಟ್ಟಿದೆ ಮತ್ತು ಇಸ್ಲಾಂ ಧರ್ಮವು ಇಂಡೋನೇಷಿಯಾದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯೊಂದಿಗೆ ಬೆಸೆದುಕೊಂಡಿದೆ.

ಮೊಹಮ್ಮದ್ ವಿಷ್ಣು ಅಥವಾ ಮೇಘವತಿ ಸುರ್ನೋಪುತ್ರಿಯಂತಹ ಹೆಸರುಗಳು ಈ ಸಂಕರ ಸಂಸ್ಕೃತಿಯನ್ನೇ ಪ್ರತಿಬಿಂಬಿಸುತ್ತವೆ. ನಮ್ಮಲ್ಲಿ ಹಿಂದೂ ಪುರಾಣ ಅಥವಾ ಜಾವಾ ಮೂಲದ ಹೆಸರುಗಳನ್ನು ಹೆಚ್ಚಾಗಿ ಇಸ್ಲಾಮಿಕ್ ಹೆಸರುಗಳೊಂದಿಗೆ ತಳಕು ಹಾಕಲಾಗುತ್ತದೆ. ಇದೂ ಒಂದು ರೀತಿಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಗುರುತುಗಳ ಏಕೀಕರಣವನ್ನು ಪ್ರತಿಬಿಂಬಿಸುವ Identity politicsನ ಭಾಗವಾಗಿದೆ.

◆ **ಒಂದು ಕಾಲದಲ್ಲಿ ಮಾತೃಪ್ರಧಾನ ಬುಡುಕಟ್ಟುಗಳು ನಿಮ್ಮಲ್ಲಿದ್ದವು. ಪ್ರಸ್ತುತ ಸಾರ್ವಜನಿಕ ಬದುಕಿನಲ್ಲಿ ಇಂಡೋನೇಷಿಯಾ ಮಹಿಳೆಯ ಪಾತ್ರವೇನು?**

ಪ್ರಸ್ತುತ ಇಂಡೋನೇಷಿಯಾದ ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಆಶಾದಾಯಕವಾಗಿದೆ. ಉತ್ತಮ ಅಂತಾನೇ ಹೇಳಬಹುದು. ಇಲ್ಲಿನ ಮಹಿಳೆಯರು ಶಿಕ್ಷಣ,ನೀತಿ ನಿರೂಪಣೆ, ವೃತ್ತಿಜಗತ್ತು ಮತ್ತು ಸಾಮಾಜಿಕ ಜೀವನದಲ್ಲಿ ವ್ಯಾಪಕವಾಗಿ ತೊಡಗಿಸಿಕೊಂಡಿದ್ದಾರೆ.

ಆಳವಾಗಿ ಬೇರುಬಿಟ್ಟ ಮಾತೃಪ್ರಧಾನ ಬುಡಕಟ್ಟುಗಳ ಪರಂಪರೆಯೇ ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಪ್ರಾತಿನಿಧ್ಯ ಬಲವಾಗಿ ಬೇರೂರಲು ಕಾರಣ ಅಂತ ನನ್ನ ಅನಿಸಿಕೆ. ರಾಜಕೀಯದಲ್ಲಿ ನಾಯಕರಾದ ಮೇಘಾವತಿ ಸುರ್ನೋಪುತ್ರಿಯಂತಹವರಿಂದ ಹಿಡಿದು ಸಾಮಾಜಿಕ ಬದಲಾವಣೆಯನ್ನು ಪ್ರೇರೇಪಿಸುವ ಕಾರ್ಯಕರ್ತೆಯರಾಗಿ ಇಲ್ಲಿನ ಮಹಿಳೆಯರು ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುತ್ತಾರೆ. ಆದಾಗ್ಯೂ, ಮಹಿಳೆಯರಿಗೆ ಸವಾಲುಗಳು ಇಲ್ಲವೇ ಇಲ್ಲ